ಮಾಧ್ಯಮಗಳೊಂದಿಗೆ ಮುಕ್ತವಾಗಿ ಮಾಹಿತಿ ಹಂಚಿಕೊಂಡಿದ್ದರು: 17ರಿಂದ 25 ವಯಸ್ಸಿನ ಏಳು ಯುವತಿಯರು ಅಲ್ಲಿ ಸೇವೆಗೆ ಅಣಿಯಾಗಿದ್ದರು. ಅಲ್ಲಿ ಆ ಕಾಲಘಟ್ಟದಲ್ಲಿ ಜನಪ್ರಿಯವಾಗಿದ್ದ ಕಾರ್ಟೂನ್‌ಗಳನ್ನು ಹೋಲುವ ವಸ್ತ್ರಗಳಿದ್ದವು. ‘ಸೇಲರ್ ಮೂನ್’ ಎನ್ನುವ ಕಾರ್ಟೂನ್ ಆಗ ಹೆಚ್ಚು ಜನಪ್ರಿಯ. ಅದು ತೊಡುತ್ತಿದ್ದ ನೀಲಿ ಮಿನಿ ಸ್ಕರ್ಟ್ ಅನ್ನೇ ಅಲ್ಲೊಬ್ಬಳು ಹುಡುಗಿ ತೊಟ್ಟು, ದಣಿದು ಬಂದ ತರುಣನಿಗೆ ಬೆಳಕನುಣಿಸುತ್ತಿದ್ದಳು. ಪ್ರೀತಿಯ ಅನುಭೂತಿಗೆ ಗಂಟೆಗಿಷ್ಟು ಎಂದು ಹಣ ನಿಗದಿಯಾಗಿತ್ತಷ್ಟೇ ಅಲ್ಲ, ಈ ರೀತಿ ವಸ್ತ್ರಗಳನ್ನು ಗ್ರಾಹಕನಿಗೆ ತಕ್ಕಂತೆ ತರುಣಿಯು ಬದಲಿಸಬೇಕೆಂದರೆ ಇನ್ನೂ 13 ಡಾಲರ್ ಹೆಚ್ಚುವರಿ ಹಣ ನೀಡಬೇಕಿತ್ತು. ಈ ಕಾಲದಲ್ಲಿ ಇದು ಒಂದು ಸಾವಿರ ರೂಪಾಯಿಗೂ ಹೆಚ್ಚು. ಕೆಲವು ತರುಣರು ಒಂದೇ ಭೇಟಿಯಲ್ಲಿ ಕೆಲವು ಸಲ ಈ ತರುಣಿಯರಿಗೆ ಉಡುಗೆ ಬದಲಿಸುವಂತೆ ಬೇಡಿಕೆ ಸಲ್ಲಿಸುತ್ತಿದ್ದುದೂ ಉಂಟು.

ಸೇವೆಗಳದ್ದೇ ಒಂದು ಮೆನು ಕಾರ್ಡ್. ತರುಣಿಯ ತೊಡೆಯ ಮೇಲೆ ಸತತವಾಗಿ ಗರಿಷ್ಠ 20 ನಿಮಿಷ ಮಲಗಬಹುದಷ್ಟೆ. ಮಲಗಲು ಮೂರು ನಿಮಿಷಕ್ಕೆ 13 ಡಾಲರ್‌ನಂತೆ ಹಣ ಕಟ್ಟಬೇಕು. ಹೆಚ್ಚೆಂದರೆ ಹತ್ತು ತಾಸು ಮಾತ್ರ ಅಲ್ಲಿ ಕಳೆಯಬಹುದು. ತರುಣಿಯು ತನ್ನ ತೊಡೆಯಮೇಲೆ ಮಲಗಬೇಕು ಎಂದರೆ ಡಬಲ್ ಶುಲ್ಕ. ತೋಳನ್ನೇ ದಿಂಬನ್ನಾಗಿಸಬೇಕೆಂದರೂ ಹೆಚ್ಚುವರಿ ಶುಲ್ಕ ಕಟ್ಟಬೇಕು. ಎಲ್ಲವೂ ಮೂರು ನಿಮಿಷಕ್ಕಿಷ್ಟು ಎಂದು ನಿಗದಿಯಾದದ್ದು. ಕಣ್ಣಲ್ಲಿ ಕಣ್ಣಿಟ್ಟು ಒಂದು ನಿಮಿಷ ನೋಡಬೇಕೆಂದರೆ, ಅದಕ್ಕೂ ಶುಲ್ಕ ತೆರಬೇಕು.

‘ಸೋಯ್ನೆಯಾ’ ಅಂಗಡಿ ಸದ್ದು ಮಾಡಿ, ಐದು ವರ್ಷ ಕಳೆದ ಮೇಲೆ ‘ಬಿಬಿಸಿ’ ವೆಬ್‌ಸೈಟ್‌ನಲ್ಲಿ ಕಿಯರನ್ ವಾರ್ಲೆ ಎಂಬುವವರು ಒಂದು ಲೇಖನ ಬರೆದರು. ಆ ಬರಹದ ಮೊದಲಲ್ಲೇ ‘ಈ ಲೇಖನದ ವಸ್ತುವಿಷಯವು ನಿಮ್ಮ ಮನಸ್ಸಿಗೆ ಗಾಸಿ ಉಂಟುಮಾಡಬಹುದು’ ಎಂಬ ಒಕ್ಕಣೆ ಇದೆ.

ಜಪಾನ್‌ನ ಟೋಕಿಯೊದಲ್ಲಿ ‘ಜೆಕೆ ಅಲೆ’ ಅಥವಾ ‘ಸ್ಕೂಲ್ ಗರ್ಲ್ ಅಲೆ’ ಎನ್ನುವ ಬೀದಿಯಿದೆ. ಹೈಸ್ಕೂಲ್ ಹುಡುಗಿ ಎನ್ನುವ ಅರ್ಥವನ್ನು ಇದು ಹೊಮ್ಮಿಸುತ್ತದೆ. ಅಲ್ಲಿ ಶಾಲಾ ಸಮವಸ್ತ್ರ ತೊಟ್ಟ

**ನಾಲ್ಕು ಗೋಡೆಗಳ ಮಧ್ಯೆಯೇ ಹೆಚ್ಚಾಗಿ ಕಳೆಯುತ್ತಾ, ತಂತ್ರಜ್ಞಾನ ಸಂಬಂಧಿ ಕೆಲಸಗಳಲ್ಲಿ ತೊಡಗಿಕೊಂಡ ಯುವಕರು ಉಳಿದ ಸಾಮಾಜಿಕ ಸಂಪರ್ಕದಿಂದ ಹೊರಗೇ ಉಳಿಯುತ್ತಾರೆ. ಮನುಷ್ಯ ಸಂಬಂಧಗಳೇ ಇಲ್ಲದಂತೆ ವರ್ಷಗಟ್ಟಲೆ ಕಳೆದಮೇಲೆ ಅವರಿಗೆ ಏಕಾಂತ ಕಾಡತೊಡಗುತ್ತದೆ.**

